ಇ) ಹಾಗಿಲ್ಲದಿದ್ದರೆ, ಯು.ಜಿ.ಡಿಯಿಂದ ಬರುವ ನೀರನ್ನು ಎಲ್ಲಿಗೆ ಹಾಯಿಸುತ್ತಾರೆ?

ಈ) ಇದರಿಂದ, ಆರೋಗ್ಯಕ್ಕೆ ಹಾನಿಕರವಾಗುವುದಿಲ್ಲವೆ, ವಾತಾವರಣ ಮಲಿನಗೊಳ್ಳುವುದಿಲ್ಲವೆ?

ಉ) ಸರ್ಕಾರ ಈ ಮಲಿನತೆ ನಿರ್ಮೂಲನಕ್ಕೆ ಯಾವ ಕ್ರಮ ಕೈಗೊಳ್ಳಲಿವೆ?

ಶ್ರೀ ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು) :

ಅ) ರಾಜ್ಯದಲ್ಲಿ ಒಟ್ಟು 38 ನಗರ:ಪಟ್ಟಣಗಳಲ್ಲಿ ಯು.ಜಿ.ಡಿ ವ್ಯವಸ್ಥೆ ಇರುತ್ತದೆ.

ಆ) ಕೊಳಚೆ ನೀರನ್ನು ಟ್ರೀಟ್‌ಮೆಂಟ್ ಮಾಡಲು ಹಾಲಿ22 ಟ್ರೀಟ್‌ಮೆಂಟ್ ಪ್ಲಾಂಟ್‌ಗಳನ್ನು ಬಳಕೆಯಲ್ಲಿದೆ.

ಇ) ಹಾಲಿ ಟ್ರೀಟ್‌ಮೆಂಟ್ ಪ್ಲಾಂಟ್ ಇಲ್ಲದ ನಗರ:ಪಟ್ಟಣಗಳಲ್ಲಿ ಬರುತ್ತಿರುವ ಕೊಳಚೆ ನೀರನ್ನು ಹತ್ತಿರದ ಹಳ್ಳಿಗಳಿಗೆ ಬಿಡಲಾಗುತ್ತಿದೆ.

ಈ) ಈ ಮಲಿನ ನೀರು ಕುಡಿಯುವ ನೀರಿನ ಮೂಲಗಳಿಗೆ ಸೇರದೆ ಇರುವುದರಿಂದ ಆರೋಗ್ಯಕ್ಕೆ ಹಾನಿಯಾಗುವ ಸಂಭವ ಇರುವುದಿಲ್ಲ. ಆದರೆ ಆ ಸ್ಥಳದಲ್ಲಿ ವಾತಾವರಣವು ಚೆನ್ನಾಗಿರುವುದಿಲ್ಲ. ಈ ಸ್ಥಳಗಳು ನಗರಗಳಿಂದ ದೂರ ಇರುವುದರಿಂದ ಒಟ್ಟಾರೆ ವಾತಾವರಣ ಅಥವಾ ಆರೋಗ್ಯಕ್ಕೆ ಕಳವಳಕಾರಿಯಾಗುವಷ್ಟು ಹಾನಿಕಾರವಾಗಿರುವುದಿಲ್ಲ.

ಉ) ಈಗ ಹಾಲಿ ಶಿವಮೊಗ್ಗ, ದಾವಣಗೆರೆ, ಹರಿಹರ, ಕೊಳ್ಳೆಗಾಲ ಹಾಗೂ ಕೆ.ಆರ್. ನಗರ ಪಟ್ಟಣಗಳಲ್ಲಿ ರಾಷ್ಟ್ರೀಯ ನದಿ ಸಂರಕ್ಷಣಾ ಯೋಜನೆಯಡಿ ಕೊಳಚೆ ನೀರನ್ನು ಶುದ್ಧೀಕರಿಸುವ ಘಟಕಗಳನ್ನು ಕೈಗೊಳ್ಳಲು ಯೋಜಿಸಲಾಗಿದೆ. ಇದಲ್ಲದೆ ಒಳಚರಂಡಿ ಯೋಜನೆಯು ಇಲ್ಲದ ನಗರ:ಪಟ್ಟಣಗಳಾದ ಭದ್ರಾವತಿ, ಶ್ರೀರಂಗಪಟ್ಟಣ ಮತ್ತು ನಂಜನಗೂಡುಗಳಲ್ಲಿ ಚರಂಡಿ ನೀರನ್ನು ಸಹ ಶುದ್ಧೀಕರಿಸುವ ಯೋಜನೆ ಹಾಕಿಕೊಳ್ಳಲಾಗಿದೆ. ಈ ಯೋಜನೆಗೆ ಹಾಲಿ ಇರುವ ಹಣಕಾಸು ವ್ಯವಸ್ಥೆಯಂತೆ ಕೇಂದ್ರ ಸರ್ಕಾರ ಶೇ.50 ಹಣ ಒದಗಿಸಲಿದೆ. ಯೋಜನೆಯ ಕಾಮಗಾರಿಗಳನ್ನು ಸೆಪ್ಟಂಬರ್- ಅಕ್ಟೋಬರ್ 97ರಲ್ಲಿ ಕೈಗೆತ್ತಿಕೊಳ್ಳಲಾಗುವುದು.

ಹಾವೇರಿ ಸಹಕಾರಿ ಸಕ್ಕರೆ ಕಾರ್ಖಾನೆ.

2243 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾವೇರಿ ಸಹಕಾರಿ ಸಕ್ಕರೆ ಕಾರ್ಖಾನೆಯ ವ್ಯಾಪ್ತಿಯ ರೈತರು ಕೊಲ್ಲಾಪುರಕ್ಕೆ ಈ ಹಿಂದೆ ಕಬ್ಬನ್ನು ಕಳಿಸಿದ್ದು ನಿಜವೇ?

ಆ) ಹಾಗಿದ್ದರೆ, ಎಷ್ಟು ಟನ್ ಕಳಿಸಲಾಗಿದೆ?

ಇ) ಆ ರೈತರಿಗೆ ಇದುವರೆಗೆ ಪಾವತಿ ಮಾಡಿದ ಹಣ ಎಷ್ಟು?

ಈ) ಇನ್ನು ಪಾವತಿ ಆಗಬೇಕಾಗಿರುವ ಹಣವೆಷ್ಟು?

ಶ್ರೀ ಉಮೇಶ್ ವಿ. ಕತ್ತಿ (ಸಕ್ಕರೆ ಸಚಿವರು) :

ಅ) ಹೌದು.

ಆ) 23,320 ಮೆ.ಟನ್.

ಇ) ಟನ್ ಒಂದಕ್ಕೆ ರೂ. 791.79ರಂತೆ ಹಣ ಪಾವತಿ ಮಾಡಲಾಗಿದೆ.

ಈ) ಟನ್ ಒಂದಕ್ಕೆ ರೂ.103.00 ರಂತೆ ಒಟ್ಟು 24.00 ಲಕ್ಷ ರೂ. ಪಾವತಿಯಾಗಬೇಕಾಗಿರುತ್ತದೆ.

ಮಂಚನಬೆಲೆ ಯೋಜನೆಯ ಕಾಮಗಾರಿ ವಿಳಂಬ

2245 - ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಗಡಿ ಪಟ್ಟಣಕ್ಕೆ ಕುಡಿಯುವ ಯೋಜನೆಯಾದ ಮಂಚನಬೆಲೆ ಯೋಜನೆಯು ಅತ್ಯಂತ ಮಂದಗತಿಯಲ್ಲಿ ನಡೆಯುತ್ತಿರುವುದಕ್ಕೆ ಕಾರಣಗಳೇನು? ಈ ಯೋಜನೆಯನ್ನು ತೀವ್ರಗೊಳಿಸಲು ಸರ್ಕಾರವು ಕ್ರಮಕೈಗೊಳ್ಳುವುದೆ?

ಆ) ಈವರೆಗೆ ಈ ಯೋಜನೆಗೆ ಎಷ್ಟು ಹಣ ಖರ್ಚು ಮಾಡಲಾಗಿದೆ? (ವಿವರ ನೀಡುವುದು)

ಇ) ಸದರಿ ಯೋಜನೆಯ ಕಾಮಗಾರಿಗಳನ್ನು ಡಿಸೆಂಬರ್ 1998ರ ವೇಳೆಗ ಪೂರೈಸಲು ಸರ್ಕಾರವು ಕ್ರಮ ಕೈಗೊಳ್ಳವುದೇ?

ಶ್ರೀ ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು) :

ಅ) ಮಾಗಡಿ ಮತ್ತು ರಾಮನಗರ ಪಟ್ಟಣಗಳಿಗೆ ಮಂಚನಬೆಲೆ ಜಲಾಶಯವನ್ನು ಮೂಲವಾಗಿಟ್ಟುಕೊಂಡು ಒಂದು ಜಂಟಿಯೋಜನೆಯ ಕಾಮಗಾರಿಗಳು ಪ್ರಗತಿಯಲ್ಲಿದ್ದಾಗ, ರಾಮನಗರಕ್ಕೆ ಈ ಜಲಾಶಯದಿಂದ ನೀರೊದಗಿಸಲಾರದೆಂದು ರೈತರು ನ್ಯಾಯಾಲಯದ ತಡೆಯಾಜ್ಞೆ ತಂದ ಕಾರಣ, ಮಾಗಡಿ ಪಟ್ಟಣಕ್ಕೆ ನೀರು ಸರಬರಾಜು ಮಾಡುವ ಯೋಜನೆಯು ವಿಳಂಬವಾಯಿತು. ಈ ಯೋಜನೆಯನ್ನು ತೀವ್ರಗೊಳಿಸಲು ಈಗಾಗಲೇ ಕ್ರಮತೆಗೆದುಕೊಳ್ಳಲಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿವೆ.

ಆ) ಈವರೆಗೆ ರೂ. 88.64 ಲಕ್ಷ ಹಣ ಖರ್ಚು ಮಾಡಲಾಗಿದೆ.